24101

K.L.E.'S COLLEGE OF COMMERCE BELAGAVI

119173

Reg. No. U15AT24C0007

**IV Semester B.Com. (SEP) Degree Examination, May/June - 2026**

**ಕನ್ನಡ**

**ಸಾಹಿತ್ಯ ಸೌಖ್ಯ – 4**

**Paper : AECC**

***(Regular)***

**Time : 3 Hours** **Maximum Marks : 80**

***Instructions to Candidates:***

**ಭಾಷೆ ಹಾಗೂ ಬರಹದ ಶುದ್ಧಿಗೆ ಗಮನ ಕೊಡಲಾಗುವುದು.**

**I. ಈ ಕೆಳಗಿನ ಬೇಕಾದ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ. (3×15=45)**

1. 'ಸಂಗೊಳ್ಳಿ ರಾಯಣ್ಣನ ಸ್ವಾತಂತ್ರ್ಯ ಹೋರಾಟ' ಸಂಗೊಳ್ಳಿ ರಾಯಣ್ಣ ಲಾವಣಿಯಲ್ಲಿ ಹೇಗೆ ಮೂಡಿ ಬಂದಿದೆ? ವಿವರಿಸಿರಿ.

2. 'ಧರ್ಮಕ್ಕೂ ಸಾಮಾಜಿಕ ಜವಾಬ್ದಾರಿ ಇದೆ' ಈ ಮಾತನ್ನು ಧರ್ಮ ಮತ್ತು ಸಾಮಾಜಿಕ ಜವಾಬ್ದಾರಿ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

3. ಮನುಷ್ಯನ ಬದುಕನ್ನು ಕಟ್ಟಿಕೊಡುವಲ್ಲಿ ಮಾತು ಬಹುಮುಖ್ಯಪಾತ್ರ ವಹಿಸುತ್ತದೆ ಎಂಬುದನ್ನು ದಿನಕರ ದೇಸಾಯಿ ಅವರ ಚೌಪದಿಗಳ ಹಿನ್ನೆಲೆಯಲ್ಲಿ ವಿವರಿಸಿರಿ.

4. ಬ್ರಿಟಿಷ್ ಆಡಳಿತ ವ್ಯವಸ್ಥೆಗೂ ಸ್ವದೇಶಿ ಆಡಳಿತ ವ್ಯವಸ್ಥೆಗೂ ಇರುವ ಅಂತರವು ತಬರನ ಕಥೆಯಲ್ಲಿ ಹೇಗೆ ವ್ಯಕ್ತವಾಗಿದೆ? ಚರ್ಚಿಸಿರಿ?

5. ಬರವಣಿಗೆಯು ಒಂದು ಕಲೆ ಎಂಬುದನ್ನು ನಿರೂಪಿಸಿ. ಅದರ ಮಹತ್ವ ಪ್ರಕಾರಗಳನ್ನು ಕುರಿತು ಬರೆಯಿರಿ?

**II. ಟಿಪ್ಪಣಿ ಬರೆಯಿರಿ (ಬೇಕಾದ ನಾಲ್ಕಕ್ಕೆ) (4×5=20)**

1 ಕುವೆಂಪು

2. ಎಚ್.ವಿ. ಸಾವಿತ್ರಮ್ಮ

3. ವಚನಗಳಲ್ಲಿ ನಂಬಿಕೆ

[P.T.O.

4. ಕೆ.ಎಸ್. ನರಸಿಂಹಸ್ವಾಮಿ

5. ಬರವಣಿಗೆ ಕಲೆಯ ಗುಣಲಕ್ಷಣಗಳು

6. ಸರ್ವಜ್ಞ

III. ಈ ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ. (15×1=15)

1 ಕುವೆಂಪು ಅವರ ಪ್ರಕಾರ 'ಅಖಂಡ ಕರ್ನಾಟಕ'ದ ಮುಖ್ಯಮಂತ್ರಿ ಯಾರು?

2. ಅ.ನ.ಕೃ. ಅವರ ಪೂರ್ಣ ಹೆಸರೇನು?

3. 'ಚೆಂಬೆಳಕಿನ ಕವಿ' ಎಂದು ಯಾರನ್ನು ಕರೆಯಲಾಗಿದೆ?

4. ಜಿ.ಎಸ್.ಶಿವರುದ್ರಪ್ಪನವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟ ಕೃತಿ ಯಾವುದು?

5. 'ಕನ್ನಡದ ಆಸ್ತಿ' ಎಂದು ಯಾರನ್ನು ಕರೆಯಲಾಗಿದೆ?

6. 'ಚುಟುಕು ಬ್ರಹ್ಮ' ಎಂದು ಯಾವ ಕವಿಯನ್ನು ಕರೆಯಲಾಗಿದೆ?

7. ಡಿ.ಕೆ. ರಾಜೇಂದ್ರ ಅವರ ಪಿ.ಎಚ್.ಡಿ. ಮಹಾಪ್ರಬಂಧದ ಹೆಸರೇನು?

8. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ತಂದೆ-ತಾಯಿಗಳ ಹೆಸರೇನು?

9. 'ಮನೆಯೊಳಗಣ ಕಿಚ್ಚು' ಕಥೆಯನ್ನು ಬರೆದವರು ಯಾರು?

10. 'ಬರಹಗಾರನ ಬದುಕು' ಇದು ಯಾರ ಆತ್ಮಕಥೆಯಾಗಿದೆ?

11. 'ಚನ್ನವೀರ ಕಣವಿ' ಅವರ ತಂದೆ-ತಾಯಿಯ ಹೆಸರೇನು?

12. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದು ಕೊಟ್ಟ ಕೃತಿ ಯಾವುದು?

13. 'ತಬರನ ಕಥೆ' ಚಲನಚಿತ್ರದ ನಿರ್ದೇಶಕರು ಯಾರು?

14. ಆರ್. ಲಕ್ಷ್ಮೀನಾರಾಯಣ ಅವರು ಹುಟ್ಟಿದ ವರ್ಷ ಯಾವುದು?

15. 'ವರ್ಣಮಾಲಾ ಲಿಪಿ ಪದ್ಧತಿ' ಎಂದರೇನು?

---